ಆರೋಗ್ಯ ಇಲಾಖೆಯ ದಾಸ್ತಾನು ಮಳಿಗೆಯಿಂದ ಔಷಧಿ ಸರಬರಾಜು

೫೦೫. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಆರೋ , ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಆರೋಗ್ಯ ಇಲಾಖೆಯ ದಾಸ್ತಾನಿನ ಮಳಿಗೆ ಔಷಧಿ ಸರಬರಾಜು ಮಾಡಿಕೊಳ್ಳುವಾಗ ಆಯಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಯವರ ಹಾಗೂ ಜಿಲ್ಲೆಯ ಅವಶ್ಯಕತೆಯಂತೆ ಸರಬರಾಜು ಮಾಡಲಾಗುತ್ತದೆಯೇ ?

ಆ) ದಾಸ್ತಾನು ಮಂಳಿಗೆಯ ಔಷಧಿಯನ್ನು ಪಡೆಯುವಾಗ ಔಷಧಿ ಗುಣಮಟ್ಟ ಪರೀಕ್ಷಿಸಿ ಹಾಗೂ ಸರಬರಾಜು ನದ ಔಷಧಿಗಳ ಗುಣಮಟ್ಟ ಪರೀಕ್ಷಿಸಿ ಜಿಲ್ಲೆಗೆ ಸರಬರಾಜು ಮಾಡಲಾಗು ತ್ತಿದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ಅವಶ್ಯಕತೆಗೆ ಲಭ್ಯವಿರುವ ಹಣ ಹಾಗೂ ನಿಗದಿಗೊಳಿಸಿದ ಪ್ರಮಾಣಕ್ಕನುಸರಿಸಿ ಸರಬರಾಜು ಮಾಡಲಾಗುವುದು.

ಆ) ಹೌದು

ಜಮಖಂಡಿ ಸಾರ್ವತ್ರಿಕ ಆಸ್ಪತ್ರೆಗೆ ಆಂಬುಲೆನ್ಸ್ ಮತ್ತು ಜನರೇಟರ್ ಒದಗಿಸುವುದು

೧೨೨. ಶ್ರೀ ಬಾಬು ರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರ ಜಿಲ್ಲೆಯ ಜಮಖಂಡಿಯ ಸಾರ್ವತ್ರಿಕ ಆಸ್ಪತ್ರೆಯಲ್ಲಿರುವ ಒಟ್ಟು ಹಾಸಿಗೆಗಳ ಸಂಖ್ಯೆ ಎಷ್ಟು ?

ಆ) ಈ ಆಸ್ಪತ್ರೆ ಸಾರ್ವತ್ರಿಕ ಆಸ್ಪತ್ರೆಯೆಂದು ಪರಿವರ್ತಿಸಲ್ಪಟ್ಟಿದ್ದು ಯಾವಾಗ ?

ಇ) ಈ ಆಸ್ಪತ್ರೆಗೆ ಅತ್ಯವಶ್ಯಕವಾಗಿರುವ ಜನರೇಟರ್ ಮತ್ತು ಆಂಬುಲೆನ್ಸ್ ಸವಲತ್ತುಗಳನ್ನು ಪೂರೈಸಲು ಸರ್ಕಾರ ಕ್ರಮಂ ಕೈಗೊಂಡಿದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ೫೦.

ಆ) ೧೯೬೧ ರಲ್ಲಿ.

ಇ) ವಿದ್ಯುತ್ ಜನಕವನ್ನು ಒದಗಿಸಲಾಗಿದೆ. ರೋಗಿವಾಹಕ ವಾಹನವನ್ನು ಖರೀದಿಸ ಬೇಕಾಗಿದೆ.

ಕೊಲ್ಲಮೊಗರು ಪ್ರಾಥಮಿಕ ಕೇಂದ್ರಕ್ಕೆ ವೈದ್ಯಾಧಿಕಾರಿಯವರ ನೇಮಕಾತಿ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬುವುದು.

೧೦೪. ಶ್ರೀ ಕೆ. ಕುಶಾಲ (ಸೂಳ್ಯ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಿಂದ ಸುಳ್ಯ ವಿಧಾನಸಭಾ ಕ್ಷೇತ್ರದ ಕೊಲ್ಲಮೊಗರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯಾಧಿಕಾರಿಗಳ ನೇಮಕಾತಿ ಮತ್ತು ಪಂಜ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿ ಗಳ ನೇಮಕಾತಿ, ಪುತ್ತೂರು ತಾಲ್ಲೂಕಿನ ಕೊಯಿಲ ಪ್ರಾಥಮಿಕ ಆರೋಗ್ಯ ಘಟಕಕ್ಕೆ ವೈದ್ಯಾಧಿಕಾರಿಗಳ ನೇಮಕ ಮಾಡಿಲ್ಲದಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಕೂಡಲೇ ತುಂಬಲಾಗುವುದೇ?